# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ. ಸಿ. ನಂ.788/2017

ಸಿಡಬ್ಲ್ಯೂ-4 ಪಿಡಬ್ಲ್ಯೂ- 4

| | | |
|---|---|---|
| ಹೆಸರು | : | ಶ್ರೀ ಭೋಗಪ್ಪ |
| ತಂದೆಯ ಹೆಸರು | : | ಧೂಳಪ್ಪ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಅಬಕಾರಿ ರಕ್ಷಕ ಆಳಂದ |
| ವಾಸ ಸ್ಥಳ | : | ಆಳಂದ |

ದಿನಾಂಕ 08.01.2023

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು ಸೇಡಂ ಅಬಕಾರಿ ವಲಯದಲ್ಲಿ ಅಬಕಾರಿ ರಕ್ಷಕ ಅಂತಾ 2011 ರಿಂದ 2015 ರವರೆಗೆ ಸೇವೆ ಸಲ್ಲಿಸಿರುತ್ತೇನೆ. ಈ ಅವಧಿಯಲ್ಲಿ ದಿನಾಂಕ 07.05.2012 ರಂದು ನಾನು ಕಚೇರಿಯಲ್ಲಿ ಇದ್ದಾಗ ನನ್ನನ್ನು ಮತ್ತು ಶ್ರೀ ಮಹದೇವಪ್ಪ ಇವರನ್ನು ನಮ್ಮ ಸಾಹೇಬರು ಕರೆಯಿಸಿ ಇಟಕಲ್ ಗ್ರಾಮದ ಈರಮ್ಮ ಇವರ ಮನೆಯಲ್ಲಿ ಅಕ್ರಮವಾಗಿ ಕಲಬೆರಕೆ ಸೇಂದಿ ಸಂಗ್ರಹಿಸಿದ್ದಾರೆಂದು ಬಾತ್ಮಿ ಬಂದಿರುವುದಾಗಿ ತಿಳಿಸಿರುತ್ತಾರೆ ಮತ್ತು ಇಬ್ಬರೂ ಪಂಚರನ್ನು ರೆಡಗಾಗಿ ಕರೆದುಕೊಂಡು ಬರಲು ಸೂಚಿಸಿರುತ್ತಾರೆ. ಆಗ ನಾನು ಮತ್ತು ಬೋಗಪ್ಪ ಇವರು ಸೇಡಂದ ಜಿ.ಕೆ. ರಸ್ತೆಯಲ್ಲಿರುವ ಒಂದು ಹೋಟಲದಲ್ಲಿ ಕುಳಿತ್ತಿದ್ದ ಚಂದಪ್ಪ ಉಡಗಿ ಮತ್ತು ಚನ್ನಬಸಪ್ಪ ಸೋಲಾಪುರ ಇವರನ್ನು ಭೇಟಿಯಾಗಿ ವಿಷಯ ತಿಳಿಸಿದಾಗ ಅವರು ರೆಡಗೆ ಒಪ್ಪಿಕೊಂಡಿರುತ್ತಾರೆ. ನಂತರ ನಾನು ನಮ್ಮ ಸಾಹೇಬರು ಮತ್ತು ಸಹದ್ಯೋಗಿಗಳು, ಪಂಚರು ಕೂಡಿಕೊಂಡು ಸರಕಾರಿ ವಾಹನದಲ್ಲಿ 04.10 ಗಂಟೆಗೆ ಹೊರಟು ಬಾತ್ಮಿ ಬಂದ ಸ್ಥಳಕ್ಕೆ 05.00 ಗಂಟೆಗೆ ತಲುಪಿರುತ್ತೇವೆ. ಆಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿದಂತೆ ಒಬ್ಬ ಮಹಿಳೆ ಸ್ಥಳದಿಂದ ಓಡಿ ಹೋಗಿದ್ದು, ಆತಳನ್ನು ಹಿಡಿಯಲು ಪ್ರಯತ್ನಿಸಿದ್ದು, ಆದರೆ ಅವಳು ಸಿಕ್ಕಿಲ್ಲ. ನಂತರ ನಮ್ಮ ಸಾಹೇಬರು ಆಕೆಯ ಮನೆಯನ್ನು ಪ್ರವೇಶ ಮಾಡಿ ಒಂದು ಮೂಲೆಯಲ್ಲಿ ಇದ್ದ 3 ಪ್ಲಾಸ್ಟಿಕ್ ಕೊಡಗಳನ್ನು ತೆಗೆದುಕೊಂಡಿದ್ದು ಅದರಲ್ಲಿ ಬಿಳಿಯ ಬಣ್ಣದ ಗಾಟು ವಾಸನೆವುಳ್ಳ ದ್ರವ ಇತ್ತು. ಪ್ರತಿ ಕೊಡದಲ್ಲಿ ಒಟ್ಟು 10 ಲೀ.ದಂತೆ ಒಟ್ಟು 30 ಲೀ. ಕಲಬೆರಕೆ ಸೇಂದಿ ಇತ್ತು. ಆಗ ನಮ್ಮ ಸಾಹೇಬರು ಹಾಜರಿದ್ದ ಪಂಚರ ಸಮಕ್ಷಮದಲ್ಲಿ ಒಂದು 180 ಎಮ್.ಎಲ್.ನ ಒಂದು ಬಾಟಲಿಯಲ್ಲಿ ಸದರಿ ಕಲಬೆರಕೆ ಸೇಂದಿಯನ್ನು ಹಾಕಿ ಅವುಗಳಿಗೆ ದಾರದಿಂದ ಕಟ್ಟಿ ಇಲಾಖ ಸಂಖ್ಯೆ 444 ಎಂದು ಬರೆದು ಅಧಿಕಾರಿಗಳ ಮತ್ತು ಪಂಚರ ಸಹಿವುಳ್ಳ ಚೀಟಿಯನ್ನು ಹಚ್ಚಿದ್ದು ಇರುತ್ತದೆ. ನೆರೆದಿದ್ದ ಜನರಿಗೆ ಓಡಿ ಹೋದ ಮಹಿಳೆಯ ಹೆಸರು ಕೇಳಿದ್ದು ಆಗ ಅವರು ಆಕೆಯ ಹೆಸರು ಈರಮ್ಮ ಗಂಡ ಬಸವಂತರಾವ, ವಃ 58 ಅಂತಾ ತಿಳಿಸಿರುತ್ತಾರೆ. ಸ್ಥಳದಲ್ಲಿಯೇ

05.00 ಗಂಟೆಯಿಂದ 06.00 ಗಂಟೆಯವರಗೆ ಪಂಚನಾಮೆಯನ್ನು ಬರೆದು ಅದಕ್ಕೆ ಪಂಚರ ಸಹಿಯನ್ನು ನಮ್ಮ ಸಾಹೇಬರು ಪಡೆದುಕೊಂಡಿರುತ್ತಾರೆ. ಆ ದಿವಸ ಓಡಿ ಹೋದ ಮಹಿಳೆಯನ್ನು ಈಗ ನೋಡಿದ್ದಲ್ಲಿ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಬಾಟಲಿಯನ್ನು ಗುರುತಿಸುತ್ತೇನೆ. ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಘಟನೆಯ ಕುರಿತು ತನಿಖಾಧಿಕಾರಿಯವರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಬಿ.ಎಸ್. ದಂಡೋತಿ ಆರೋಪಿ ಪರ ವಕೀಲರಿಂದ**

ಇಟಕಲ್ ಗ್ರಾಮ 4 ಸಾವಿರ ಜನ ಸಂಖ್ಯೆ ಹೊಂದಿದ ಗ್ರಾಮ ಎಂದರೆ ಸರಿ. ಆ ದಿವಸ ನಾವು ಇಟಕಲ್ ಗ್ರಮಕ್ಕೆ ರೆಡಿಗೆಂದು ಹೋಗಿರುದಾಗಿ ಹೇಳಿದ್ದು ಯಾರ ಮನೆಯ ಹತ್ತಿರ ಮರೆಯಾಗಿ ನಿಂತಿರುತ್ತೇವೆ ಎಂದು ಹೇಳಲು ಬರುವುದಿಲ್ಲ. ನಾವು ರೇಡಿಗೆಂದು ಹೋದಾಗ ಘಟನಾ ಸ್ಥಳದಲ್ಲಿ 20 ರಿಂದ 25 ಜನ ಸೇರಿದ್ದರು. ಆರೋಪಿತಳದು 2017 ರಲ್ಲಿ 60 ವಯಸ್ಸು ಇತ್ತು ಎಂದರೆ ಸರಿ. ಆಕೆಗೆ ವಯಸ್ಸಾಗಿದ್ದರಿಂದ ಓಡಿ ಹೋ್ೀಗುವ ಸಾಧ್ಯತೆ ಇರಲಲ್ಲ ಎಂದರೆ ಸರಿಯಲ್ಲ. ಆರೋಪಿಯ ಮನೆ 2 ಕೋಣೆಯದು ಇತ್ತು. ಮುದ್ದೆ ಮಾಲುಗಳು ಅಡುಗೆ ಮನೆಯಲ್ಲಿ ಇದ್ದವು. ಘಟನಾ ಸ್ಥಳದ ಆರೋಪಿಯ ವುನೆ ಎಂಬ ಕುರಿತು ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಸಾಹೇಬರು ಸಾರ್ವಜನಿಕರಿಗೆ ಹೇಳಿಕೆ ನೀಡುವಂತೆ ಕೋರಿದ್ದು ಆದರೆ ಅವರು ಹೇಳಿಕೆ ನೀಡಲು ಒಪ್ಪಿಲ್ಲ. ದಿಃ 07/05/2012 ರಂದು ನಾನು ನಮ್ಮ ಸಹೋದ್ಯೋಗಿ ಮತ್ತು ಸಾಹೇಬರು ಕೂಡಿಕೊಂಡು ಇಟಕಲ್ ಗ್ರಾಮಕೆ ಆರೋಪಿಯ ಮೆನೆಯ ಮೇಲೆ ರೆಡಿಗೆಂದು ಹೋಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ್ರೂಪಿ ನಾವು ರೇಡಿಗೆಂದು ಹೋದಾಗ ಸ್ಥಳದಿಂದ ಒಡಿಹೋಗಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮನೆಯಲ್ಲಿ ಪಾ್ಲಟಿಕ ಕೊಡದಲ್ಲಿ ದ್ರವ ಬಣ್ಣದ ಪಗಾದ ದೊರೆತ್ತಿರುವುದಾಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೊಪಿತಳ ಸ್ವಾಧಿನದಿಂದ 30 ಲಿ. ಕಲಬೆರಿಕೆ ಸೇಂದಿ ಜಪ್ತಿ ಪಡಿಸಿಕೊಂಡಿರುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿಕ್ಕ ಸೇಂದಿಯಿಂದ ರಾಸಾಯನಿಕ ಪರಿ್ೀಕ್ಷಯ ಸಲುವಾಗಿ 180 ಎಂ.ಎಲ್ ನ ಬಾಟಲಿಯಲ್ಲಿ ಸೇಂದಿ ತೆಗೆದುಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯ್ಲ್ಲ. ನಾನು ನನ್ನ ಹಿರಿಯ ಮೇಲಾಧಿಕಾರಿಯವರ ಮಾತು ಕೇಳಿ ಘಟನೆ ನಡೆಯದೆ ಇದ್ದರು ಆರೋಪಿತಳ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆ ಎಂದರೆ ಸರಿಯಲಲ. ಮುದ್ದೆ ಮಾಲಿಗೂ ಆ್ರೂಪಿತಳಿಗೂ ಏನು ಸಂಬಂಧಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.